**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವೆ. ಸಂಖ್ಯೆ:266/2020**

ಡಿ.ಡಬ್ಲ್ಯೂ03 ಶ್ರೀಮತಿ ವೆಂಕಟಮ್ಮ

**ಸಾಕ್ಷಿಯನ್ನು ದಿನಾಂಕಃ 04-08-2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಖ್ಯವಿಚಾರಣೆಃ- ಪ್ರತಿವಾದಿಯ ಪರ ಶ್ರೀ. ಕೆ ಸಿ ಎಂ ವಕೀಲರಿಂದ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ಸಹಿ ಮಾಡಿರುತ್ತೇನೆ.**

ನನ್ನ ಗಂಡನ ಹೆಸರು ವೆಂಕಟಮುನಿ ಎಂದಾಗಿರುತ್ತದೆ. ಅವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ಗಂಡನಾದ ವೆಂಕಟಮುನಿ ಮರಣ ಹೊಂದಿ ಸುಮಾರು 30 ವರ್ಷಗಳಾಗಿವೆ. ಸಾಕ್ಷಿಗೆ ನಿಡಿ25 ಮರಣ ಶಾಸನ ಪತ್ರ ವನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಗಂಡನ ಸಹಿಯನ್ನು ನೋಡಿ ಗುರುತಿಸುತ್ತಾರೆ ಸದರಿ ಸಹಿಯನ್ನು ಈಗ ನಿಡಿ 25 ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ತಾನು ಹೆಬ್ಬೆಟ್ಟಿನ ರುಜುವನ್ನು ಹಾಕಿರುತ್ತೇನೆ. ಸದರಿ ನಿಡಿ 25 ದಾಖಲೆಗೆ ರಾಮಪ್ಪ ಮತ್ತು ಕೃಷ್ಣಪ್ಪ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ.

**ಪಾಟೀಸವಾಲುಃ ವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**